ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಅಧ್ಯಕ್ಷರೆ, ಭೀಮಾ ನದಿ ಬಗ್ಗೆ ಉತ್ತರವನ್ನಾದರೂ ಸ್ವಲ್ಪ ಕೊಡಿಸಿ ಸಾರ್. ನಾವು ಸಮಾಧಾನ ಮಾಡಿಕೊಂಡು ಹೋಗ್ತೀವೆ.

ಅಧ್ಯಕ್ಷರು : ನಾನು ಮೊನ್ನೆಯೇ ಹೇಳಿದೆ. ಮಾನ್ಯ ಮಂತ್ರಿಗಳು ಇರೋದಿಲ್ಲ ಎಂದರೆ ಮಂತ್ರಿಗಳು ಇಲ್ಲದಿದ್ದರೆ ಪರವಾಗಿಲ್ಲ ಕೇವಲ ಮೆನ್‌ಶನ್ ಮಾಡ್ತೇವೆ ಎಂದು ಹೇಳಿದಿರಿ. ಆಗ ಆ ರೀತಿ ಹೇಳ್ತೀರಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಏನ್ ಸಾರ್ ಇದು. ಉತ್ತರಾನೂ ಇಲ್ಲ, ಏನೂ ಇಲ್ಲ ಅಂದ್ರೆ ಹೇಗೆ?

ಅಧ್ಯಕ್ಷರು : ಸ್ವಾಮಿ ಶೆಟ್ಟರ್‌ರವರೆ, ದಯವಿಟ್ಟು ಕ್ಷಮಿಸಬೇಕು. ನಾನು ಮೂರ್ನಾಲ್ಕು ಸಲ ಹೇಳಿದೆ, ಮಂತ್ರಿಗಳು ಒಂದ್ಸಲ ಇರೋದಿಲ್ಲವೆಂದು ಹೇಳಿದಾಗ ಅವರು ನಮಗೆ ಉತ್ತರವೇ ಬೇಡಿ, ಕೇವಲ ಮೆನ್‌ಶನ್ ಮಾಡ್ತೇವೆ ಎಂದು ಹೇಳ್ತಾರೆ. ಆಗ ಆ ರೀತಿ ಹೇಳಿದ್ದಾರೆ, ಆದರೆ ಈಗ ಈ ರೀತಿ ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೆ, ಇದಕ್ಕೆ ಉತ್ತರ ಕೊಟ್ಟಿದ್ದೇವೆ. ಉತ್ತರ ಕೊಟ್ಟಿಲ್ಲವೆಂದು ಆಪಾದನೆ ಬರಬಾರದು.

ಅಧ್ಯಕ್ಷರು : ಬರಬಾರದು, ಕರೆಕ್ಟ್.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಒಂದೇ ಒಂದು ಸೆಂಟೆನ್ಸ್‌ನಲ್ಲಿ ಏನು ಹೇಳಿದ್ದೇವೆಂದರೆ, ಸಬ್‌ಜುಡೀಸ್, ಆದ್ದರಿಂದ ಉತ್ತರಿಸುವುದಿಲ್ಲ ಎಂದು ಹೇಳಿದ್ದೇವೆ.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಹೆಚ್ಚು ನೀವು ಕರುಣೆಯನ್ನು, ಕನಿಕರವನ್ನು ಅವರಿಗೆ ತೋರಿಸಿ ತೋರಿಸಿ ಸರ್ಕಾರದ ಬಿಲ್‌ಗಳು ಇವೊತ್ತು ಹಾಗೆಯೇ ಉಳಿದುಕೊಳ್ಳುವ ಹಾಗಾಯಿತು.

ಅಧ್ಯಕ್ಷರು : ಪೆಂಡಿಂಗ್ ಇಲ್ಲವಲ್ಲಾ ತೆಗೆದುಕೊಳ್ಳೋಣ, ಕೃಷ್ಣಪ್ಪನವರೇ, we will take up. I am ready to sit here even upto p.m. ಪಾರ್ಲಿಮೆಂಟಿನಲ್ಲಿ ಕೂರುವುದಿಲ್ಲವೆ, ಒಂದೊಂದು ದಿನ ಹನ್ನೊಂದು ಗಂಟೆಯವರೆಗೂ. I am ready, ಆದರೆ ಸಭೆಯನ್ನು ನಾನು ಕೇಳಬೇಕು. ಏಕೆಂದರೆ ಈಗಾಗಲೇ 8.30 ಆಗಿರುವುದರಿಂದ ಸಭೆಯನ್ನು ಕೇಳಬೇಕು.

ಶ್ರೀ ಎ. ಕೃಷ್ಣಪ್ಪ : ಅಧ್ಯಕ್ಷರೆ, ದಯಮಾಡಿ ನಾನು ಮಾತನಾಡಲು ಅವಕಾಶ ಕೊಡಿ. ನಾವೇನಾದರೂ ಹೇಳಿದರೆ ತಾವು ಕಾನೂನು ಎಂದು ಹೇಳುತ್ತೀರಿ. ಕಾನೂನಿಗೆ ನಾವು ತಲೆಬಾಗಬೇಕು. ತಮಗೆ ಗೌರವ ಕೊಟ್ಟು ನಾವು ಸುಮ್ಮನಿರುತ್ತೇವೆ.

ಅಧ್ಯಕ್ಷರು : ಸ್ವಾಮಿ, ಬಿಲ್‌ಗಳನ್ನು ತೆಗೆದುಕೊಳ್ಳುವುದಿಲ್ಲ ವೆಂದು ಹೇಳಿದಿರಲ್ಲಾ. ಬಿಲ್‌ಗಳನ್ನು ತೆಗೆದುಕೊಳ್ಳೋಣ. ಅದನ್ನು ತೆಗೆದುಕೊಳ್ಳುವ ಮೊದಲು ಒಂದು ಪ್ರಕಟಣೆ ಇದೆ. ಈ ಪ್ರಕಟಣೆ ಆಗಿಹೋಗಿಬಿಡಲಿ.

19. ಪ್ರಕಟಣೆ

ಅಧ್ಯಕ್ಷರು : "ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ

ಮತ್ತು ನಡವಳಿಕೆಗಳನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 8ನೇ ಆಗಸ್ಟ್ 2002ರಂದು ಯಾವುದೇ ತಿದ್ದುಪಡಿಗಳಿಲ್ಲದೇ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ. (1) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ 2002

(2) ಕರ್ನಾಟಕ ಕಾರ್ಖಾನೆಗಳ (ತಿದ್ದುಪಡಿ) ವಿಧೇಯಕ 2002" ಈಗ shall we take up the Bills or not?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿರತಕ್ಕಂಥವುಗಳೆಲ್ಲಾ ಒರಿಜಿನಲ್ ಬಿಲ್ಸ್. ಇಲ್ಲಿಂದ ಇನಿಶಿಯೇಟ್ ಆಗಬೇಕು. ಅವು ಮೇಲ್ಮನೆಗೆ ಹೋಗಬೇಕಾಗುತ್ತದೆ. ಮೇಲ್ಮನೆ ಈಗಾಗಲೇ ಅವರು ಮುಂದಕ್ಕೆ ಹೋಗಿರುವುದರಿಂದ ಮಸೂದೆ ಪಾಸ್ ಮಾಡುವುದರಲ್ಲಿ ಏನೂ ಅರ್ಥವಿಲ್ಲ.

ಅಧ್ಯಕ್ಷರು : ಆಯಿತು ಬಿಡಿ. ಆಯಿತು.

20. ಸದನದ ಕಾರ್ಯಕಲಾಪಗಳಿಗೆ ಅಡ್ಡಿಯಾಗುವುದನು ತಪ್ಪಿಸಲು ನಿಯಮಾವಳಿಗಳ ರಚನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ವಿಚಾರಗಳಿಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಉತ್ತರ ಹೇಳಿಬಿಡುತ್ತೇನೆ. ತಮ್ಮ ಮತ್ತು ವೈ.ಕೆ. ರಾಮಯ್ಯನವರು ಹೇಳಿದ ವಿಷಯ ಮತ್ತು ವಿರೋಧ ಪಕ್ಷದ ನಾಯಕರಾದ ಶೆಟ್ಟರ್‌ರವರು ಮತ್ತು ಸಿಂಧ್ಯಾರವರು, ಆಡಳಿತ ಪಕ್ಷದಿಂದ ಖರ್ಗೆಯವರನ್ನು ಕರೆಸಿಕೊಂಡು ಸಂಜೆ 5.00 ಗಂಟೆಗೆ ನಾನು ಮಾತನಾಡಿದ್ದೇನೆ. ನಾನು ಇಲ್ಲಿಂದ 4.30ಗೆ ಎದ್ದು ಹೋದೆನಲ್ಲಾ, ಆಮೇಲೆ ಅವರನ್ನು ಕರೆಸಿಕೊಂಡು ಎಲ್ಲವನ್ನೂ ಮಾತನಾಡಿದೆ. ಅವರೇನು ಹೇಳಿದರು ಎಂದರೆ, ಸ್ವಾಮಿ ನಾವೇನು ಮಾಡೋಕಾಗುತ್ತೆ, ನಿಮ್ಮ ಪ್ರಿವಿಲೀಜ್, ಯಾವ ರೀತಿ ನೀವು ಅಥವಾ ಹಕ್ಕು ರೀತಿ ಇದು ಪ್ರಿವಿಲೀಜೋ ಅಥವಾ ಆಗುತ್ತೋ ಇಲ್ವೋ ಎನ್ನುವುದು ಒಂದು. ಏನು ಅವರನ್ನು ಮಾತನಾಡುವುದಕ್ಕೆ ಬಿಡಲಿಲ್ಲವಾ ಅದರ ಬಗ್ಗೆ: ಅದು ಒಂದು. ಎರಡನೆಯದಾಗಿ ತಾವು ಹೇಳಿದ್ದು, ಎರಡು ದಿವಸದಿಂದ ಒಂದು ಕೋಟಿ ರೂಪಾಯಿ ಖರ್ಚಾಗಿದೆ. ಇದನ್ನು ಯಾರು ತುಂಬಿಕೊಡುತ್ತಾರೆ ಎಂದು ಕೇಳಿದಿರಿ. ಇದರ ಬಗ್ಗೆ ಕೂಡ ನಾನು ಮಾತನಾಡಿದೆ. ಕಡೆಗೆ ಕನ್‌ಕ್ಲೂಶನ್‌ಗೆ ಏನು ಬರಲಾಯಿತು ಎಂದರೆ ಇಂಥ ರೀತಿ ಇನ್ನು ಮುಂದಕ್ಕೆ ಆಗದೇ ಇರುವ ಹಾಗೆ ನೋಡಿಕೊಳ್ಳುವುದಕ್ಕೋಸ್ಕರ ಈಗೇನು ನಾವು ರೂಲ್ಸ್ ಕಮಿಟಿಯನ್ನು ಮಾಡಿದ್ದೇವಲ್ಲಾ ಅಲ್ಲಿಯೇ ರೂಲ್ಸ್ ಅನ್ನೇ ಅಮೆಂಡ್ ಮಾಡುವುದು ಬೆಟರ್ ಎಂದು ಹೇಳಿ ತೀರ್ಮಾನವಾಯಿತು. ಆ ಮೀಟಿಂಗ್‌ನ್ನು ಬೇಕಾದರೆ ಒಂದುವಾರದಲ್ಲಿಯೇ ಅಥವಾ ಎಂಟತ್ತು ದಿವಸದಲ್ಲಿಯೇ ಕರೆಯುತ್ತೇನೆ. ರೂಲ್‌ನಲ್ಲಿಯೇ ಅಮೆಂಡ್ ಮಾಡಬೇಕಾಗಿದೆ. ನನಗೇ ಹಕ್ಕಿದೆ, ಆದರೂ ಕೂಡ ಆ ಹಕ್ಕನ್ನು ನಾನು ಚಲಾಯಿಸಬೇಕಾದರೆ, ಎಸ್.ಎಶ್. ಪಾಟೀಲರೆ ನಾಳೆ ನೀವೇ ಹೇಳ್ತೀರಿ, ಯಾವ ರೂಲ್ಸ್ ಪ್ರಕಾರ ನೀವು ಹೀಗೆ ಮಾಡ್ತೀರಿ ಸ್ವಾಮಿ ಎಂದು ಕೇಳುತ್ತೀರಿ. ಅವೆಲ್ಲಾ ಏಕೆ? ರೂಲ್‌ನಲ್ಲಿಯೇ ಅಮೆಂಡ್ ಮಾಡಿಬಿಟ್ಟರೆ ಯಾವ ತಂಟೆಯೂ ಇರುವುದಿಲ್ಲ. ಇದರಲ್ಲಿ ಎರಡು ವಿಷಯಗಳು ಬರುತ್ತವೆ. ಈ ರೀತಿ ವಿನಾಕಾರಣ ಸಭೆ ಮುಂದೆ ಹೋಗುವಂತೆ ಮಾಡಿ ಗಲಾಟೆಗಳು